# ಧೀರಮಾತಾ

❑ ವಿ.ಮೀನಾ

**ಸ್ವಾಮಿ ವಿವೇಕಾನಂದರ ಕಾರ್ಯದಲ್ಲಿ ಪೂರ್ಣರೂಪದಲ್ಲಿ ನೆರವಾದ ಅಮೆರಿಕದ ಧೀರ ಮಹಿಳೆ ಶ್ರೀಮತಿ ಸಾರಾ ಬುಲ್ ಅವರ ಪರಿಚಯವನ್ನು ಮಾಡಿಕೊಟ್ಟಿರುವ ಕುಮಾರಿ ಮೀನಾ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.**

ದುರ್ಗಾ ಸಪ್ತಶತಿ ಅಥವಾ ಚಂಡಿಯಲ್ಲಿ ಜಗನ್ಮಾತೆಯನ್ನು ಒಂದೆಡೆ ಹೀಗೆ ಸ್ತುತಿಸಲಾಗಿದೆ : **ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ । ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥** —"ಯಾವ ದೇವಿಯು ಸರ್ವಭೂತಗಳಲ್ಲೂ ಮಾತೃರೂಪದಲ್ಲಿ ನೆಲೆಸಿರುವಳೋ ಆಕೆಗೆ ನಮಸ್ಕಾರ." ಈ ದಿವ್ಯ ವಿಭೂತಿಯಾದ ಮಾತೃತ್ವ ಎಲ್ಲ ಭೂತಗಳಲ್ಲೂ ಇದ್ದರೂ, ಕೆಲ ವೆಡೆ ವಿಶೇಷವಾಗಿ ಪ್ರಕಟವಾಗುತ್ತದೆ. ಇಂತಹ ದಿವ್ಯ ಆಧ್ಯಾತ್ಮಿಕ ಸಂಪತ್ತನ್ನು ವಿಶೇಷವಾಗಿ ಪಡೆದು ತಮ್ಮ ಶ್ರೇಷ್ಠವಾದ ಜೀವನದಲ್ಲಿ ಅನೇಕರಿಗೆ ಮಾತೆಯಾಗಿ ಬೆಳಗಿದವರೆ ಶ್ರೀಮತಿ ಸಾರಾ ಬುಲ್—ಸ್ವಾಮಿ ವಿವೇಕಾನಂದರ ಅಮೆರಿಕದ ಮಾತೆ. ಸ್ವಾಮಿ ವಿವೇಕಾನಂದರು ಪ್ರಥಮಬಾರಿ ಅಮೆರಿಕಕ್ಕೆ ತೆರಳಿದಾಗ ಅಲ್ಲಿ ಅವರು ಅನೇಕ ಪ್ರತಿಕೂಲ ಪರಿಸ್ಥಿತಿಗಳನ್ನೂ ಕಷ್ಟಗಳನ್ನೂ ಎದುರಿಸಬೇಕಾಯಿತು. ಅಂತಹ ಪರಿಸ್ಥಿತಿಯಲ್ಲಿ ಮೊದಲ ಪರಿಚಯದಿಂದ ಜೀವನದ ಕಡೆಯವರೆಗೂ ಶ್ರೀಮತಿ ಸಾರಾ ಬುಲ್ ಸ್ವಾಮೀಜಿಯವರಿಗೆ ಮಾತೆಯಾಗಿ, ಶಿಷ್ಯೆಯಾಗಿ, ಸ್ನೇಹಿತೆಯಾಗಿ ಸೇವೆ ಸಲ್ಲಿಸಿ ಭಾರತದ ಸನಾತನ ಧರ್ಮದ ಅಭ್ಯುದಯಕ್ಕೆ ಶ್ರಮಿಸಿದ ಅಪೂರ್ವ ಕೀರ್ತಿಗೆ ಪಾತ್ರರಾಗಿದ್ದಾರೆ.

ಅಮೆರಿಕದ ಓರ್ವ ಭಕ್ತರ ಮನೆಯಲ್ಲಿ ಸ್ವಾಮಿ ವಿವೇಕಾನಂದರು ಗಹನವಾದ ವಿಚಾರಗಳ ಚರ್ಚೆ ಮಾಡುತ್ತಿದ್ದಾಗ 'ನಿಜವಾದ ಸಂತ ಯಾರು?' ಎನ್ನುವ ವಿಷಯ ಚರ್ಚೆಗೆ ಬಂತು. ಅಲ್ಲಿ ನೆರೆದಿದ್ದ ಗುಂಪು ಸ್ವಾಮೀಜಿಯವರ ಕಡೆಗೇ ಕುತೂಹಲದಿಂದ ನೋಡಲಾರಂಭಿಸಿತು. ಒಂದರೆಕ್ಷಣ ಮೌನದನಂತರ ಗಂಭೀರವಾದ ಧ್ವನಿಯಲ್ಲಿ ಸ್ವಾಮಿ ವಿವೇಕಾನಂದರು ಹೇಳಿದರು, "ಸಂತ ಶೆಂದರೆ ಸಾರಾ ಬುಲ್" ಎಂದು. ಮತ್ತೊಂದು ಕಡೆ ತಮ್ಮ ಸ್ನೇಹಿತರೊಬ್ಬರಿಗೆ ಬರೆದ ಪತ್ರವೊಂದರಲ್ಲಿ ಸ್ವಾಮಿ ವಿವೇಕಾನಂದರು ಹೇಳಿದರು : "ನೋಡು, ನೀನು ಸಾರಾ ಬುಲ್‌ರನ್ನು ಅರಿಯಬೇಕು. ಆಕೆ ಓರ್ವ ಸಂತಳು. ನಿಜವಾದ ಅರ್ಥದಲ್ಲಿ ಆಕೆಯೊಬ್ಬಳು ಸಂತ ಮಹಿಳೆ. ಆಕೆಯನ್ನು ಅರಿಯುವುದೆಂದರೆ ತೀರ್ಥಾಟನೆ ಮಾಡಿದಂತೆ." ಸ್ವಾಮಿ ಶಾರದಾನಂದರು ಒಂದೆಡೆ ಹೀಗೆ ಹೇಳುತ್ತಾರೆ : "ಸಾರಾ ಬುಲ್ಲರ ಆದರ್ಶ, ಜಗತ್ತಿನ ಎಲ್ಲರನ್ನೂ ತನ್ನವರನ್ನಾಗಿಸಿಕೊಂಡು, ಇಡೀ ಜಗತ್ತಿಗೇ ಅಜ್ಜಿ(grandmother)ಯಾಗುವುದೇ ಆಗಿದೆ." ಸ್ವಾಮಿ ಶಾರದಾನಂದರು ಸಾರಾರ ಬಳಿ ಎಷ್ಟೊಂದು ಆತ್ಮೀಯತೆಯಿಂದ ಇದ್ದರೆಂದರೆ ಆಕೆಯನ್ನು ಪ್ರೀತಿಯಿಂದ "granny" ಎನ್ನುತ್ತಿದ್ದರು. ಸಾರಾ, ತಮಗೆ ಸೂರ್ಯಚಂದ್ರರಂತೆ ಈರ್ವರು ಪುತ್ರರಿರುವರೆಂದು ಹೇಳಿ, ಸ್ವಾಮಿ ವಿವೇಕಾನಂದರನ್ನು ಸೂರ್ಯನಿಗೂ ಸ್ವಾಮಿ ಶಾರದಾನಂದರನ್ನು ಚಂದ್ರನಿಗೂ ಹೋಲಿಸುತ್ತಿದ್ದರು. ಸ್ವಾಮಿ ಶಾರದಾನಂದರ ಕೋಣೆಯಲ್ಲಿ ಎರಡು ಚಿತ್ರಪಟಗಳು ಅವರ ಜೀವನದ ಕಡೆಯವರೆಗೂ ಇದ್ದುವು—ಒಂದು ಶ್ರೀಮಾತೆ ಶಾರದಾದೇವಿಯವರದು, ಇನ್ನೊಂದು ಶ್ರೀಮತಿ ಸಾರಾ ಬುಲ್ಲರದು. ಆಕೆ ಅವರ ಜೀವನದಲ್ಲಿ ಅಷ್ಟೊಂದು ಮಾತೃಪ್ರೇಮವನ್ನು ಹರಿಸಿದ್ದರು.



*ಶ್ರೀಮತಿ ಸಾರಾ ಬುಲ್*

ಸಾರಾರ ಮಾತಾಪಿತೃಗಳು ಶ್ರೀಮತಿ ಅಮೀಲಿಯಾ ಹಾಗೂ ಶ್ರೀ ಜೋಸೆಫ್ ಜಿ. ತ್ರಾಪ್. ೧೮೫೦ರಲ್ಲಿ ಸಾರಾರ ಜನ್ಮವಾಯಿತು. ಸಾರಾರ ತಾಯಿ ಆಧ್ಯಾತ್ಮಿಕ ಪ್ರವೃತ್ತಿಯವರೂ ಸಾಮಾಜಿಕ ಸುಧಾರಣೆಗಾಗಿ ಕೆಲಸ ಮಾಡುವವರೂ ಆಗಿದ್ದರು. ಸಾರಾ ತೇಜಸ್ವಿನಿಯೂ ಸಂಗೀತಪ್ರಿಯರೂ ಒಳ್ಳೆಯ ಪಿಯಾನೋ ವಾದಕರೂ ಆಗಿದ್ದರು. ತಮ್ಮ ೨೦ನೆಯ ವಯಸ್ಸಿನಲ್ಲಿ ನಾರ್ವೆಯ ಸುಪ್ರಸಿದ್ಧ ಪಿಟೀಲುವಾದಕರಾದ ಶ್ರೀಮಾನ್ ಓಲಿ ಬುಲ್

(Ole Bull)ರ ಪಾಣಿಗ್ರಹಣ ಮಾಡಿದರು. ಆಗ ಆತನಿಗೆ ಸುಮಾರು ೬೦ ವರ್ಷ ವಯಸ್ಸಾಗಿದ್ದರೂ, ಸಾರಾ ಆತನ ವಿದ್ಯಾಬುದ್ಧಿಗಳಿಗೆ, ಸಂಗೀತಕಲೆಗೆ ಆಕರ್ಷಿತರಾಗಿ ಆತನ ಸಹಧರ್ಮಿಣಿಯಾದರು. ಓಲಿ ಬುಲ್‌ರದು ಒಳ್ಳೆಯ ಹೃದಯ, ಅವರಿಗೆ ಆಧ್ಯಾತ್ಮಿಕ ಒಲವು ಇತ್ತು. ಇದರಿಂದ ಸಾರಾ ಬಹುವಾಗಿ ಪ್ರಭಾವಿತರಾದರು. ಸಾರಾ ಆತನ ಸಂಗೀತ ಕಛೇರಿಗಳನ್ನು ವ್ಯವಸ್ಥೆಗೊಳಿಸುವುದು ಮತ್ತು ಹಣದ ಜವಾಬ್ದಾರಿ ತೆಗೆದುಕೊಳ್ಳುವುದು ಮುಂತಾದ ಕಾರ್ಯಗಳನ್ನು ಬಹು ದಕ್ಷತೆಯಿಂದ ನಿರ್ವಹಿಸುತ್ತಿದ್ದರು. ಈಕೆಯ ಕಾರ್ಯದಕ್ಷತೆಯಿಂದ ಬಹುವಾಗಿ ಹಣವೂ ಬಂದು ಸೇರಿತು.

ಇಷ್ಟರಲ್ಲಿ ಸಾರಾ ಓರ್ವ ಹೆಣ್ಣು ಮಗುವಿಗೆ ತಾಯಿಯಾದಳು. ಆ ಮಗುವಿನ ಹೆಸರು ಓಲಿಯ(Olea). ಓಲಿಯ ಸಾರಾಳ ಜೀವನದ ನೋವಿನ ಗಾನವನ್ನು ಹಾಡುವುದಕ್ಕೇ ಜನಿಸಿದಳೆಂದು ತೋರುವುದು. ಹತ್ತು ವರ್ಷದ ದಾಂಪತ್ಯ ಜೀವನವನ್ನು ಸಾರಾ ಸುಖವಾಗಿಯೇ ನಡೆಸಿದರು. ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ಶ್ರೀಮಾನ್ ಬುಲ್‌ರು ದೈವಾಧೀನರಾದಾಗ ಸಾರಾ ಕೇವಲ ೩೦ ವರ್ಷದ ಯುವತಿ ಹಾಗೂ ವಿಧವೆ. ಶ್ರೀಮಾನ್ ಬುಲ್‌ರ ಕಾಲದಲ್ಲಿ ಎಮ್ಮಾ ಥರ್ಸ್‌ಬಿ (Emma Thursby) ಎಂಬ ಸಂಗೀತಗಾರಳೊಂದಿಗೆ ಸಾರಾಳ ಸ್ನೇಹ ಉಂಟಾಯಿತು. ಅದು ಅವರ ಜೀವನದ ಕಡೆಯವರೆಗೂ ಉಳಿದುಕೊಂಡಿತು. ಎಮ್ಮಾ ಹಾಡಿದರೆ ಆಕೆಯ ಹಾಡಿಗೆ ಸಾರಾ ಪಿಯಾನೋ ನುಡಿಸುತ್ತಿದ್ದರು. ಈಗ ಸಾರಾ ತಮ್ಮ ಸಮಯವನ್ನು ಹೆಚ್ಚು ಹೆಚ್ಚು ಸಾಹಿತ್ಯರಚನೆ, ವಿದ್ಯಾಚರ್ಚೆಗಳು ಮುಂತಾದುವುಗಳಲ್ಲಿ ಕಳೆಯತೊಡಗಿದರು.

೧೮೯೪ರಲ್ಲಿ ಸಾರಾಳ ಗೆಳತಿ ಎಮ್ಮಾ ಥರ್ಸ್‌ಬಿ ತನ್ನ ಮನೆಯಲ್ಲಿ ಸಭೆಯನ್ನು ನಡೆಸಿ ಅದರಲ್ಲಿ ಭಾಗವಹಿಸಲು ಸ್ವಾಮಿ ವಿವೇಕಾನಂದರನ್ನು ಆಹ್ವಾನಿಸಿದರು. ಬಹುಶಃ ಸಾರಾ ಕೂಡ ಇದರಲ್ಲಿ ಭಾಗವಹಿಸಿರಬೇಕು. ಅನಂತರ ಸಾರಾ ಮತ್ತು ಆಕೆಯ ಗೆಳತಿ ಸಾರಾ ಫಾರ್‌ಮರ್(Sara Farmer) ಇಬ್ಬರೂ ಸೇರಿ ಗ್ರೀನೇಕರ್‌ನಲ್ಲಿ ಸಮ್ಮೇಳನಗಳನ್ನು ನಡೆಸುವ ಬಗೆಗೆ ಚಿಂತಿಸಿದರು. ಈ ಸಮ್ಮೇಳನದಲ್ಲಿ ಭಾಗವಹಿಸಲು ಚಿಕಾಗೋ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ್ದ ಬೌದ್ಧಮತದ ಅನುಯಾಯಿಯಾದ ಧರ್ಮಪಾಲರನ್ನು ಸಾರಾ ಆಹ್ವಾನಿಸಿದರು. ಮುಂದೆ ೧೮೯೪ರ ಜುಲೈನಲ್ಲಿ ತಮ್ಮ ಬೇಸಿಗೆಯ ಸಮಯವನ್ನು ಗ್ರೀನೇಕರ್‌ನಲ್ಲಿ ಕಳೆಯಲು ಸ್ವಾಮಿ ವಿವೇಕಾನಂದರನ್ನು ಆಹ್ವಾನಿಸಲಾಯಿತು. ಅಲ್ಲಿಗೆ ಬಂದ ಸ್ವಾಮೀಜಿಯವರು ಶುಕ್ರವಾರದ ಒಂದು ವಿಶೇಷ ಭಾಷಣದಲ್ಲಿ, 'ಭಗವಂತನ ಸತ್ಯ' (Reality of God) ಎಂಬ ವಿಷಯದ ಬಗ್ಗೆ ಮಾತನಾಡಿದರು. ಗ್ರೀನೇಕರ್‌ನ ಸಮ್ಮೇಳನಗಳು ಬಹು ಪ್ರಸಿದ್ಧವಾದವು. ಅಲ್ಲಿ ನಡೆದ ಸಮ್ಮೇಳನಗಳಲ್ಲೆಲ್ಲ ಸಾರಾ ಭಾಗವಹಿಸಲಾಗಲಿಲ್ಲ. ಕಾರಣ ಆಕೆಯ ಗೆಳತಿ ಎಮ್ಮಾ ಥರ್ಸ್‌ಬಿ ಹಾಡಿನ ಕಾರ್ಯಕ್ರಮಗಳಿಗಾಗಿ ಹಲವಾರು ಕಡೆಗೆ ಹೋಗುತ್ತಿದ್ದುದರಿಂದ, ಸಾರಾ ಆಕೆಯ ಹಾಡಿಗೆ ಪಿಯಾನೋ ನುಡಿಸಲು ಆಕೆಯೊಡನೆ ಹೋಗಬೇಕಾಗುತ್ತಿತ್ತು.

ಸಾರಾ ಹಾಗೂ ಸಾರಾಳ ಗೆಳತಿ ಸಾರಾ ಫಾರ್ಮರ್‌ರ ಶ್ರಮದಿಂದಾಗಿ ಗ್ರೀನೇಕರ್ ಬೇಸಿಗೆಯ ಶಿಬಿರಗಳು ಚೆನ್ನಾಗಿ ನಡೆಯುತ್ತಿದ್ದವು. ಜೊಸೆಫೈನ್ ಲಾಕ್ ಎಂಬಾಕೆ ಇದರ ಬಗೆಗೆ ಬರೆಯುತ್ತಾ, "ಸ್ವಾಮಿ ವಿವೇಕಾನಂದರು ಹಿಂದೂ ಗುರುಗಳಲ್ಲಿ ರಾಜಕುಮಾರರಿದ್ದಂತೆ. ಪ್ರೀತಿಗಾಗಿ ಪ್ರೀತಿಯನ್ನು ಬೋಧಿಸಿದರು. ಅವರ ಮಾತಿನಲ್ಲಿ ಎಂತಹ ಮಧುರತೆ ಮತ್ತು ಬೆಳಕು ಇದ್ದವು!"

ಈ ಸಮ್ಮೇಳನಗಳೆಲ್ಲ ಮುಗಿದಮೇಲೆ ಧರ್ಮಪಾಲರು ಸಾರಾರಿಗೆ ಕೃತಜ್ಞತಾಪೂರ್ವಕವಾಗಿ ಒಂದು ಪತ್ರ ಬರೆದು ಅದರಲ್ಲಿ "ನೀವು ನನಗೆ ಬಹುಮಟ್ಟಿಗೆ ನೆಮ್ಮದಿ ನೀಡಿದ್ದೀರಿ. ನೀವು ನನಗೆ ತಾಯಿಯ ಕರುಣೆಯನ್ನು ತೋರಿದ್ದೀರಿ ಹಾಗೂ ನನಗೆ ಸತ್ಯ ಸಾಕ್ಷಾತ್ಕಾರ ಮಾಡಿಕೊಳ್ಳಲು ಸಹಾಯಮಾಡಿದ್ದೀರಿ" ಎಂದು ತಿಳಿಸಿದರು.

ಸ್ವಾಮಿ ವಿವೇಕಾನಂದರು ಒಮ್ಮೆ ಮಾತನಾಡುತ್ತಾ "ಮನುಷ್ಯತ್ವ, ಮುಮುಕ್ಷುತ್ವ ಮತ್ತು ಮಹಾಪುರುಷಸಂಶ್ರಯ ಇವು ಮೂರೂ ಜೀವನದಲ್ಲಿ ಬಯಸಬಹುದಾದ ಶ್ರೇಷ್ಠ ವಿಷಯಗಳು" ಎಂದು ಹೇಳಿದರು. ಸಾರಾ ತಮ್ಮ ಜೀವನದ ಆದರ್ಶವನ್ನು ಭಗವದ್ಗೀತೆಯಲ್ಲಿ ಪಡೆದಿದ್ದರು. ಆಕೆ ತನ್ನ ಗುರು ಅಥವಾ ನಿಜವಾದ ಮಹಾಪುರುಷನ ಪರಿಚಯವನ್ನು ಸ್ವಾಮಿ ವಿವೇಕಾನಂದರಲ್ಲಿ ಪಡೆದರು. ಸ್ವಾಮಿ ವಿವೇಕಾನಂದರ ಮಾರ್ಗದರ್ಶನದ ಮೂಲಕ ತಮ್ಮ ಜೀವನದ ಆದರ್ಶವನ್ನು ಪಡೆಯಬಹುದೆಂದು ಆಕೆ ಭಾವಿಸಿದರು. ಸಾರಾ ಯಾವ ನಿಜವಾದ ಶಾಂತಿಯನ್ನು ಅರಸುತ್ತಿದ್ದರೊ ಅದನ್ನು ಸ್ವಾಮಿ ವಿವೇಕಾನಂದರ ಸಾನ್ನಿಧ್ಯದಲ್ಲಿ ಗ್ರೀನೇಕರ್‌ನಲ್ಲಿದ್ದಾಗ ಪಡೆದರು.

ಸಾರಾ ಈಗ ತಮ್ಮ ಜೀವನ, ಹಣ, ಸೇವೆ, ಸರ್ವಸ್ವವನ್ನು ಸ್ವಾಮಿ ವಿವೇಕಾನಂದರ ಕಾರ್ಯಕ್ಕಾಗಿ ಸಮರ್ಪಿಸಲು ಸಿದ್ಧರಿದ್ದರು. ೧೮೯೪ರಲ್ಲಿ ಸ್ವಾಮಿ ವಿವೇಕಾನಂದರು ಸಾರಾರ ಮನೆಗೆ ಮೊದಲ ಬಾರಿಗೆ ಆಗಮಿಸಿ ಸುಮಾರು ಹತ್ತುದಿನ ಅಲ್ಲಿ ಕಳೆದರು. ಆ ಸಮಯದಲ್ಲಿ ಅವರು ಸಾರಾರಿಗೆ ತಮ್ಮ ಶ್ರೀಗುರು ರಾಮಕೃಷ್ಣರ ಬಗೆಗೆ ತಿಳಿಸಿದರು. ಶ್ರೀರಾಮಕೃಷ್ಣರ ಭವ್ಯವಾದ, ದಿವ್ಯವಾದ ವ್ಯಕ್ತಿತ್ವದ ಬಗೆಗೆ ಕೇಳಿ ಸಾರಾ ಬಹು ಸ್ಫೂರ್ತಿಯನ್ನು ಪಡೆದರು. ಇದು ಸ್ವಾಮಿ ವಿವೇಕಾನಂದರ ಜೀವನದಲ್ಲೂ ಒಂದು ಮುಖ್ಯವಾದ ಮೈಲುಗಲ್ಲು. ಸಾರಾರಿಗೆ ಮಾತೃಹೃದಯ ಮತ್ತು ಬುದ್ಧಿ ಸಂಪತ್ತು ಎರಡೂ ಇದ್ದವು. ಒಮ್ಮೆಗೇ ಸ್ವಾಮಿ ವಿವೇಕಾನಂದರ ತಾಯಿಯಾಗಿ ತಮ್ಮ ಜವಾಬ್ದಾರಿಯನ್ನು ಆಕೆ ಕಂಡುಕೊಂಡರು, ಸ್ವಾಮಿಗಳ ಒಳಿತಿಗಾಗಿ, ಮೇಲ್ಮೆಗಾಗಿ ಕಾತರತೆಯನ್ನು ಹೊಂದಿದರು. ಸಾರಾರ ಜೊತೆಯಲ್ಲಿ ಇದ್ದಾಗ ಸ್ವಾಮಿಗಳು ಹಣಕ್ಕಾಗಿ ಯಾವ ಕಷ್ಟವನ್ನೂ ಅನುಭವಿಸುತ್ತಿರಲಿಲ್ಲ. ಸಾರಾ, ಸ್ವಾಮೀಜಿ ಹೊರಡುವಾಗ ಅವರ ಕೆಲಸಕ್ಕಾಗಿ ೫೦೦ ಡಾಲರ್ ಕೊಟ್ಟು ಅದನ್ನು ಬ್ಯಾಂಕ್‌ನಲ್ಲಿಟ್ಟು ಬೇಕಾದಾಗ ಹಣ ತೆಗೆದುಕೊಳ್ಳುವಂತೆ ಸಲಹೆಯಿತ್ತರು. ಅದರೊಂದಿಗೆ ಒಂದು ಪತ್ರವನ್ನಿಟ್ಟು, "ನೀವು ನನ್ನ ಮನೆಗೆ ಬಂದು ಅದನ್ನು ಕೃತಾರ್ಥವನ್ನಾಗಿಸಿದ್ದೀರಿ. ನಿಮ್ಮ ದಿವ್ಯವಾದ ಸಾನ್ನಿಧ್ಯದಿಂದ ನನಗೆ ಅತ್ಯಮೂಲ್ಯ ರತ್ನವನ್ನು ಕೊಟ್ಟ

ಪ್ರೀರಿ. ನನ್ನ ಪತಿ ಈಗ ಬದುಕಿದ್ದಿದ್ದರೆ ನಿಮ್ಮನ್ನು ತಮ್ಮ ಪುತ್ರ ನನ್ನಾಗಿ ಸ್ವೀಕರಿಸುತ್ತಿದ್ದರು" ಎಂದು ಅದರಲ್ಲಿ ಬರೆದಿದ್ದರು. ಸ್ವಾಮೀಜಿಯವರ ತಾಯಿಯಾಗಿ ಅವರಿಗಾಗಿ ಹೊಸದಾಗಿ ಹೊಲಿಸಿದ ಬಟ್ಟೆಗಳನ್ನು ಇತ್ತರು. ಅದರಲ್ಲಿ ಒಂದು ಸಣ್ಣ ಪತ್ರವಿಟ್ಟು "ನನ್ನ ಅತ್ಯಂತ ಪ್ರೀತಿಯ ಮಗುವಿಗೆ" ಎಂದು ಬರೆದು "ಇವನ್ನು ನೀವು ಹಲವಾರು ಸುಖದ ದಿನಗಳಲ್ಲಿ ಉಪಯೋಗಿಸಿರಿ" ಎಂದು ಬರೆದಿದ್ದರು. ಕಡೆಯಲ್ಲಿ "ಭಗವಂತನಲ್ಲಿ ನಿಮ್ಮ ತಾಯಿ" ಎಂದು ಸಾರಾ ರುಜು ಹಾಕಿದ್ದರು.

ಸಾರಾರ ಈ ರೀತಿಯ ನಿರ್ವ್ಯಾಜ ಪ್ರೇಮದಿಂದ ಸ್ವಾಮಿ ವಿವೇಕಾನಂದರ ಕಾರ್ಯ ಅಮೆರಿಕದಲ್ಲಿ ಹಾಗೂ ಭಾರತದಲ್ಲಿ ಬಹು ಉತ್ಸಾಹದಿಂದ ಪ್ರಾರಂಭವಾಯಿತು. ಯಾವಾಗ ಹಣದ ಒತ್ತಡ ಬಂದರೂ ಸ್ವಾಮೀಜಿ ಸಾರಾರನ್ನು ಕೇಳಬಹುದಾಗಿತ್ತು. ಏಕೆಂದರೆ ಸಾರಾ ಸ್ವಾಮಿಗಳ ಕೆಲಸ ತನ್ನ ಕೆಲಸವೆಂದೆ ಭಾವಿಸಿದ್ದರು. ಕ್ರಮೇಣ ವೇದಾಂತ ಸೊಸೈಟಿಗಳು ಅಮೆರಿಕದ ನ್ಯೂಯಾರ್ಕ್, ಬಾಸ್ಟನ್ ಮುಂತಾದ ಹಲವು ಕಡೆ ಪ್ರಾರಂಭವಾದುವು. ಸ್ವಾಮಿ ವಿವೇಕಾನಂದರ ಕಾರ್ಯ ಯಶಸ್ವಿಯಾಗಿ ನಡೆಯಲು ಅವರನ್ನು ಅಂದಿನ ಬುದ್ಧಿಜೀವಿಗಳಿಗೆ, ಮನನಶೀಲ ವ್ಯಕ್ತಿಗಳಿಗೆ ಸಾರಾ ಪರಿಚಯಮಾಡಿಸಿಕೊಟ್ಟರು.

ಸಾರಾರ ಮನೆಯಲ್ಲಿ ವಿಲಿಯಂ ಜೇಮ್ಸ್ ಸ್ವಾಮಿ ವಿವೇಕಾನಂದರನ್ನು ಭೇಟಿಯಾದರು. ೧೮೯೫ರಲ್ಲಿ ಜೇಮ್ಸ್‌ರ *The New Science of Psychology* ಎಂಬ ಪುಸ್ತಕ ಅಮೆರಿಕದಲ್ಲಿ ತುಂಬ ಬಳಕೆಯಲ್ಲಿತ್ತು. ಜೇಮ್ಸ್‌ರವರಿಗೆ ವಿವೇಕಾನಂದರಿಂದ ಬಹಳಷ್ಟು ಸಹಾಯವಾಯಿತು. ಸ್ವಾಮಿ ವಿವೇಕಾನಂದರು ಅನುಷ್ಠಾನ ವೇದಾಂತಿಗಳೂ ಅಪೂರ್ವ ರಾಜಯೋಗಿಗಳೂ ಆಗಿದ್ದರು. ಸಾರಾ ಈ ಪುರಾತನ ಮನಃಶಾಸ್ತ್ರದ ಪ್ರತಿನಿಧಿಯನ್ನೂ ಹಾಗೂ ಆಧುನಿಕ ಪಾಶ್ಚಾತ್ಯ ಮನಃಶಾಸ್ತ್ರದ ಪಿತನೆನಿಸಿದ ವಿಲಿಯಂ ಜೇಮ್ಸ್‌ರನ್ನೂ ಒಟ್ಟಿಗೆ ಸೇರಿಸುವಲ್ಲಿ ಕಾರಣೀಭೂತರಾದರು. ಇದು ನಿಜವಾಗಿಯೂ ಒಂದು ಜಯವನ್ನು ಸಾಧಿಸಿದಂತೆಯೇ ಆಯಿತು. ಸ್ವಾಮಿ ವಿವೇಕಾನಂದರೂ ಸಹ ಅಮೆರಿಕದ ಅತ್ಯಂತ ಮೇಧಾವಿ ಜನರ ಪರಿಚಯ ಹೊಂದಿ ಬಹುಮಟ್ಟಿಗೆ ಉಪಕಾರವನ್ನು ಪಡೆದರು.

'ಭಾರತದ ಸ್ತ್ರೀಯರು' ಎಂಬ ವಿವೇಕಾನಂದರ ಭಾಷಣ ಬಹು ಪ್ರಭಾವಶಾಲಿಯಾಗಿತ್ತು. ಸಾರಾರಿಗೆ ಈಗ ಶ್ರೀರಾಮಕೃಷ್ಣರ ಸಹಧರ್ಮಿಣಿಯಾದ ಶಾರದಾದೇವಿಯವರನ್ನೂ, ಸ್ವಾಮಿ ವಿವೇಕಾನಂದರ ತಾಯಿಯಾದ ಭುವನೇಶ್ವರಿಯನ್ನೂ ಸಂಪರ್ಕಿಸುವ ಆಸೆಯಾಯಿತು. ಸ್ವಾಮಿ ವಿವೇಕಾನಂದರಿಂದ ಅವರ ಬಗೆಗೆ, ಮೇಲಾಗಿ ಭಾರತದ ಸ್ತ್ರೀಯರ ಬಗೆಗೆ ಅರಿತುಕೊಂಡು, ಅಮೆರಿಕದ ಕ್ರಿಶ್ಚಿಯನ್ ಮಿಷನರಿಗಳು ಅಮೆರಿಕದಲ್ಲಿ ಭಾರತದ ಸ್ತ್ರೀಯರ ಬಗೆಗೆ ಮಾಡುತ್ತಿದ್ದ ಅಪಪ್ರಚಾರವನ್ನು ತಡೆಯಲು ಪ್ರಯತ್ನಿಸಿದರು. ಸ್ವಾಮಿ ವಿವೇಕಾನಂದರು ಶ್ರೀಮತಿ ಹೇಲ್‌ಗೆ ಬರೆದ ಒಂದು ಪತ್ರದಲ್ಲಿ ಹೀಗೆ ತಿಳಿಸುತ್ತಾರೆ : "ಇಲ್ಲಿ ಸಾರಾ ಬುಲ್ ಹಾಗೂ ಇನ್ನಿತರ ಮಹಿಳೆಯರು ನನಗೆ ಬಹುವಾಗಿ ಸಹಾಯ ಮಾಡುತ್ತಿದ್ದಾರೆ. ಅವರೆಲ್ಲಾ ಅತ್ಯಂತ ಪ್ರಾಮಾಣಿಕರೂ ನನ್ನನ್ನು ಪ್ರೀತಿಸುವವರೂ ಆಗಿದ್ದಾರೆ. ಅವರೆಲ್ಲಾ ಸಮಾಜದಲ್ಲಿ ಗಣ್ಯಸ್ಥಾನದಲ್ಲಿ ಇರುವುದರಿಂದ ನನಗೆ ಅವರು ಸಹಾಯ ಮಾಡುವ ಶಕ್ತಿಯನ್ನೂ ಪಡೆದಿದ್ದಾರೆ." ಆ ವರ್ಷದ ಕ್ರಿಸ್‌ಮಸ್ ಹಬ್ಬದಲ್ಲಿ ಸಾರಾ, ಸ್ವಾಮಿ ವಿವೇಕಾನಂದರ ಮಾತೆಯಾದ ಭುವನೇಶ್ವರೀದೇವಿಗೆ ಒಂದು ಕೃತಜ್ಞತಾಪತ್ರವನ್ನು ಬರೆದು, ಅದರಲ್ಲಿ ವಿವೇಕಾನಂದರ ಕಾರ್ಯಗಳನ್ನು ಬಹುವಾಗಿ ಕೊಂಡಾಡಿ, ಇಂತಹ ಪುತ್ರರತ್ನನನ್ನು ಹಡೆದು ತಮ್ಮ ದೇಶದ ಸೇವೆಗೆ ಕಳುಹಿಸಿದ್ದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ತಿಳಿಸಿದರು. ಸುಮಾರು ಹನ್ನೆರಡು ಜನ ಗಣ್ಯಸ್ತ್ರೀಯರು ಆ ಪತ್ರಕ್ಕೆ ರುಜು ಮಾಡಿದ್ದರು.

೧೮೯೬ರಲ್ಲಿ ನ್ಯೂಯಾರ್ಕ್‌ನಲ್ಲಿ ಸ್ವಾಮಿ ವಿವೇಕಾನಂದರು ನೀಡಿದ ಭಾಷಣಗಳಲ್ಲಿ ಸಾರಾ ಭಾಗವಹಿಸಲಾಗಲಿಲ್ಲ. ಏಕೆಂದರೆ ಆಕೆಯ ತಂದೆ ಮರಣ ಶಯ್ಯೆಯಲ್ಲಿದ್ದರು, ಹಾಗೂ ಮಗಳು ಓಲಿಯ ಅನಾರೋಗ್ಯದಿಂದ ನರಳುತ್ತಿದ್ದಳು. ಹೇಗಾದರೂ ನ್ಯೂಯಾರ್ಕ್ ಸ್ನೇಹಿತರಿಂದ ಅಲ್ಲಿನ ಸಮಾಚಾರಗಳನ್ನೆಲ್ಲಾ ಸಾರಾ ತಿಳಿಯುತ್ತಿದ್ದರು. ೧೮೯೬ರ ಜನವರಿಯಲ್ಲಿ ಸಾರಾಳ ತಂದೆ ಮರಣಹೊಂದಿದರು. ತಮ್ಮ ಮಗಳಿಗಾಗಿ ಅಪಾರವಾದ ಆಸ್ತಿ ಹಾಗೂ ಶುಭ್ರ ಬುದ್ಧಿಯ ಕಾರ್ಯದಕ್ಷತೆಯನ್ನು ಬಿಟ್ಟುಹೋದರು. ಈ ಸಮಾಚಾರವನ್ನು ಅರಿತ ಸ್ವಾಮಿ ವಿವೇಕಾನಂದರು ಆಕೆಗೆ ಆತ್ಮನ ಅಚಲತೆ, ಅಮರತೆಯ ಬಗೆಗೆ ಅರಿವನ್ನುಂಟುಮಾಡುತ್ತಾ ಸಮಾಧಾನಕರ ಪತ್ರವನ್ನು ಬರೆದರು. ತಂದೆಯನ್ನೂ ಪತಿಯನ್ನೂ ಕಳೆದುಕೊಂಡು ಸಾರಾ ಸ್ವಲ್ಪ ಅಸ್ಥಿರರಾದರು. ಈಗ ಆಕೆಗೆ ಇದ್ದ ಒಂದೇ ಆಸರೆ ಎಂದರೆ ತಮ್ಮ ತೇಜಸ್ವೀ ಪುತ್ರರಾದ ಸ್ವಾಮಿ ವಿವೇಕಾನಂದರು. ಈಗ ಆಕೆಯ ಮಾತೃಹೃದಯ ತಮ್ಮ ಪುತ್ರನ ಪೂರ್ಣಬೆಳವಣಿಗೆಗೆ ಸಹಾಯ ಮಾಡಲು ಕಾತರಗೊಂಡಿತು.

ನ್ಯೂಯಾರ್ಕ್, ಬಾಸ್ಟನ್ ಕೇಂದ್ರಗಳಲ್ಲಿ ವೇದಾಂತ ಸೊಸೈಟಿಗಳು ಪ್ರಾರಂಭವಾದಾಗ ಅಲ್ಲಿ ಲಿಯೋ ಲ್ಯಾಂಡ್ಸ್‌ಬರ್ಗ್ (ಸ್ವಾಮಿ ಕೃಪಾನಂದ) ಎಂಬಾತ ಸ್ವಾಮಿ ವಿವೇಕಾನಂದರಿಗೆ ಈ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದರು. ಆತ ಸಾರಾಳ ಪರಿಚಯ ಪಡೆದು ಎಲ್ಲ ಸಮಾಚಾರಗಳನ್ನೂ ಆಕೆಗೆ ತಿಳಿಸುತ್ತಿದ್ದರು. ಸಾರಾ, ಲಿಯೋ ಲ್ಯಾಂಡ್ಸ್‌ಬರ್ಗ್‌ರಿಗೂ ಎಲ್ಲ ವಿಧದ ಸಹಕಾರ, ಸಹಾನುಭೂತಿ ತೋರಿದರು. ಸ್ವಾಮಿ ಕೃಪಾನಂದರು ಹಲವಾರು ಕಾರಣಗಳಿಂದ ವೇದಾಂತ ಸೊಸೈಟಿಯಲ್ಲಿ ಹೊಂದಿಕೊಳ್ಳಲಾರದೆ ಕಷ್ಟಪಡುತ್ತಿರುವಾಗಲೂ ಸಾರಾ ತಾಯಿಯಂತೆ ಆತನಿಗೆ ಬೇಕಾಗಿದ್ದ ಆರ್ಥಿಕ, ಮಾನಸಿಕ, ಬೌದ್ಧಿಕವಾದ ಸಹಾಯಗಳನ್ನು ನೀಡಿದರು. ಆತನ ಅಸೂಯಾಸ್ವಭಾವವನ್ನು ಗುರುತಿಸಿ ಅದನ್ನು ತಿದ್ದಿಕೊಳ್ಳಬೇಕೆಂದು ಸಾರಾ ಆತನಿಗೆ ಬೋಧನೆ ಮಾಡಿದರು. ಬಹುಕಾಲ ಸಾರಾರ ಮನೆಯಲ್ಲಿ ತಂಗಿದ್ದ ಸ್ವಾಮಿ ಕೃಪಾನಂದರು ಆಕೆಯಿಂದ ಬಹಳವಾಗಿ ಪ್ರಭಾವಿತರಾಗಿ ತಮ್ಮ ಸ್ವಭಾವವನ್ನು ತಿದ್ದಿಕೊಂಡರು. ಆಕೆಗೆ ಬರೆದ ಒಂದು ಪತ್ರದಲ್ಲಿ ಅವರು ಈ

ರೀತಿ ಬರೆಯುತ್ತಾರೆ : "ಆಹಾ, ನಿಮ್ಮ ಮನೆಯಲ್ಲಿ ಇದ್ದಾಗ ಎಂತಹ ಶಾಂತಿಯನ್ನು ಅನುಭವಿಸಿದೆ, ನೀವು ನಿಮ್ಮ ಸುತ್ತಲೂ ಶಾಂತಿಯ ಗಾಳಿಯನ್ನು ಬೀಸುವಿರಿ. ನಾನೀಗ ದೂರದಲ್ಲಿದ್ದರೂ ನಿಮ್ಮ ಧ್ಯಾನದಲ್ಲೇ ಇದ್ದೇನೆ. ಎಂತಹ ಪ್ರಶಾಂತತೆ ನಾನು ನಿಮ್ಮೊಡನೆ ಅನುಭವಿಸಿದೆನೆಂದರೆ ಅದರ ನೆನಪು ಮುಂದೆ ಬರಬಹುದಾದ ದುರ್ದಿನಗಳಲ್ಲಿ ಸಹಾಯ ಮಾಡುತ್ತದೆ."

ಸ್ವಾಮಿ ವಿವೇಕಾನಂದರ ಭಾಷಣಗಳನ್ನು ಬರೆದಿಟ್ಟುಕೊಳ್ಳಲು ಜೋಸೈ ಗುಡ್‌ವಿನ್ ಎಂಬ ಓರ್ವ ಹೊಸ ಶೀಘ್ರಲಿಪಿಕಾರನನ್ನು ನೇಮಿಸಿಕೊಳ್ಳಲಾಯಿತು. ಆತನೂ ಸಹ ಸಾರಾಳ ಜೀವನದಲ್ಲಿ ಬಹು ಆತ್ಮೀಯನಾದನು. ಸ್ವಾಮಿ ವಿವೇಕಾನಂದರ ಸಂಸರ್ಗಕ್ಕೆ ಬಂದವರಿಗೆಲ್ಲಾ ಸಾರಾ ತಾಯಿಯಾಗುತ್ತಾರೆ. ಒಂದು ಪತ್ರದಲ್ಲಿ ಸ್ವಾಮಿ ವಿವೇಕಾನಂದರು ಈ ರೀತಿ ಬರೆದರು : "ನನ್ನ ನಿಜವಾದ ಸ್ನೇಹಿತರೆಂದರೆ ಅಮೇರಿಕದಲ್ಲಿ ಸಾರಾ ಬುಲ್, ಭಾರತದಲ್ಲಿ ರಾಜಾ ಅಜಿತ್ ಸಿಂಗ್." ಸ್ವಾಮಿ ವಿವೇಕಾನಂದರು ಅಮೇರಿಕದಿಂದ ಲಂಡನ್‌ಗೆ ಹೋಗಿ ಅಲ್ಲಿಂದ ಭಾರತಕ್ಕೆ ತೆರಳುವರೆಂದು, ಅಲ್ಲಿನ ವೇದಾಂತದ ಕೆಲಸದ ಜವಾಬ್ದಾರಿಯನ್ನು ಪೂರ್ತಿಯಾಗಿ ಸಾರಾರಿಗೆ ಕೊಡಲಾಯಿತು. ಸ್ವಾಮಿ ವಿವೇಕಾನಂದರು, ಗುಡ್‌ವಿನ್ ಜೊತೆಯಲ್ಲಿ ಭಾರತಕ್ಕೆ ಮರಳಿದರು. ಅಲ್ಲಿ ಅವರಿಗೆ ನೀಡಿದ ಭಾರೀ ಸ್ವಾಗತವನ್ನು ಗುಡ್‌ವಿನ್ ಸಾರಾರಿಗೆ ಪತ್ರಮುಖೇನ ತಿಳಿಸಿದನು.

ಅದೇ ವರ್ಷ ಸಾರಾ ಮತ್ತು ಜೋಸೆಫಿನ ಮ್ಯಾಕ್ಲೋಡ್ ಸ್ವಾಮಿ ಶಾರದಾನಂದರ ಜೊತೆ ಭಾರತಕ್ಕೆ ಬಂದರು. ಭಾರತದಲ್ಲಿ ಸ್ವಾಮಿ ವಿವೇಕಾನಂದರನ್ನು ಕಂಡು ಸಾರಾರಿಗಾದ ಆನಂದ ವರ್ಣಿಸಲಸದಳ. ಸಾರಾ ಭಾರತಕ್ಕೆ ಬಂದ ಮುಖ್ಯ ಉದ್ದೇಶ ಸ್ವಾಮಿ ವಿವೇಕಾನಂದರ ಕೆಲಸದಲ್ಲಿ ನೆರವಾಗುವುದಾಗಿತ್ತು. ಅದನ್ನು ಕಾರ್ಯಗತಗೊಳಿಸುವುದು ಹೇಗೆ ಎಂದು ಈಗ ಚಿಂತಿಸತೊಡಗಿದರು. ೧೮೯೭, ಜನವರಿ ೨೮ರಂದು ಮಿಸ್ ಮಾರ್ಗರೆಟ್ ನೊಬೆಲ್ ಭಾರತಕ್ಕೆ ಬಂದರು—ಭಾರತ ನಾರಿಯರ ಏಳಿಗೆಗಾಗಿ ಕಾರ್ಯಮಾಡಲು. ಇದಕ್ಕೆ ಸ್ವಾಮಿ ವಿವೇಕಾನಂದರೇ ಪ್ರೇರಣೆ ನೀಡಿದ್ದರು. ಸಾರಾ ಹಾಗೂ ನೊಬೆಲ್‌ರ ಪರಸ್ಪರ ಪರಿಚಯ ಒಂದು ವಿಶೇಷ ಘಳಿಗೆಯಲ್ಲಿ ಉಂಟಾಯಿತೆನ್ನಬೇಕು. ಏಕೆಂದರೆ ಆ ಸಂಬಂಧ ಗಾಢವಾಗಿ, ಪರಸ್ಪರ ಪೂರಕವಾಗಿ ಜೀವಿತದ ಕಡೆಯವರೆಗೂ ಉಳಿದುಕೊಂಡಿತು. ನೋಬೆಲ್ ಇದಕ್ಕೆ ಮುಂಚೆ ಇಂಗ್ಲೆಂಡ್‌ನಲ್ಲಿ ಸ್ವಾಮಿ ವಿವೇಕಾನಂದರ ಭಾಷಣಗಳಿಂದ ಪ್ರಭಾವಿತರಾಗಿ ಈಗ ಅವರ ಕೆಲಸದಲ್ಲಿ ನೆರವಾಗಲು ಭಾರತಕ್ಕೆ ಬಂದಿದ್ದರು. ಅವರು ಸಾರಾರಿಗಿಂತ ವಯಸ್ಸಿನಲ್ಲಿ ಚಿಕ್ಕವರೂ, ಅತ್ಯಂತ ಬುದ್ಧಿಶಾಲಿನಿಯೂ ಧೈರ್ಯವಂತರೂ ಆಗಿದ್ದರು. ಆಕೆಯ ಈ ಎಲ್ಲ ಗುಣಗಳಿಗಾಗಿ ಹಾಗೂ ಆಕೆಗೆ ವಿವೇಕಾನಂದರ ಮೇಲಿದ್ದ ಗೌರವ, ವಿಶ್ವಾಸಗಳನ್ನು ಕಂಡು ಸಾರಾ ಮುಗ್ಧರಾದರು. ಮುಂದೆ ಸ್ವಾಮಿ ವಿವೇಕಾನಂದರು ಈ ಈರ್ವರು ಮಹಿಳೆಯರ ಕುರಿತಾಗಿ ಉದ್ಗರಿಸುತ್ತಾರೆ: "ಸಾರಾ ನನ್ನ ಆದರ್ಶದ ಧ್ವನಿ. ಆ ಆದರ್ಶದ ನಿರೂಪಣೆ ನೊಬೆಲ್. ಈ ಈರ್ವರು ನಾರಿಯರು ನನ್ನಂತೆಯೇ ದೈವೀಪ್ರೇರಣೆಯನ್ನು ಹೊಂದಿದವರಾಗಿದ್ದಾರೆ."

ಸಾರಾ ಒಂದು ದಿವ್ಯ ಉದ್ದೇಶವನ್ನಿಟ್ಟುಕೊಂಡು ಭಾರತಕ್ಕೆ ಬಂದಿದ್ದರು—ಇಲ್ಲಿನ ಸ್ತ್ರೀಯರಿಗೆ ಸಹಾಯ ಮಾಡಲು. ಈಗ ಭಾರತದ ಆದರ್ಶ ನಾರಿಯಾದ ಶ್ರೀಮಾತೆ ಶಾರದಾದೇವಿಯವರನ್ನು ದರ್ಶಿಸಲು ಸಾರಾ ಉತ್ಸುಕರಾದರು. ಮೊದಲ ದರ್ಶನದಲ್ಲೇ ಸಾರಾ ಶ್ರೀಮಾತೆ ಶಾರದಾದೇವಿಯವರ ದಿವ್ಯತ್ವವನ್ನು ಅರಿತರು. ಅದರ ಒಂದು ಹೊಳಹನ್ನು ಒಂದು ಪತ್ರದಲ್ಲಿ ಮುಂದೆ ಮ್ಯಾಕ್ಸ್ ಮುಲ್ಲರ್‌ರಿಗೆ ಈ ರೀತಿ ಕೊಡುತ್ತಾರೆ: "ಪಾಶ್ಚಾತ್ಯರಲ್ಲಿ ನಾವೇ ಪ್ರಪ್ರಥಮವಾಗಿ ಶಾರದಾದೇವಿಯವರ ದರ್ಶನ ಪಡೆಯಲು ಅನುಮತಿಯನ್ನು ಪಡೆದವರು. ಆಕೆ ನಮ್ಮನ್ನು 'ಮಕ್ಕಳೇ' ಎಂದು ಕರೆದು, ಈ ಭೇಟಿ ದೈವನಿಮಿತ್ತವಾದುದೆಂದು ಹೇಳಿ ನಮ್ಮೊಡನೆ ಅತ್ಯಂತ ಆತ್ಮೀಯತೆಯಿಂದ ಒಂದಾದರು." ಸಾರಾ ಹಲವಾರು ಬಾರಿ ತಮ್ಮ ಶ್ರೀಗುರುಗಳಾದ ಸ್ವಾಮಿ ವಿವೇಕಾನಂದರೊಂದಿಗೆ ವ್ಯಾವಹಾರಿಕ ವಿಷಯಗಳಲ್ಲಿ ತರ್ಕ ಮಾಡುತ್ತಿದ್ದರು. ಭಾರತದಲ್ಲಿಯಾದರೂ ಪ್ರತಿಯೊಬ್ಬರೂ ಶ್ರೀಗುರುವಿಗೆ ಪೂರ್ಣ ರೀತಿಯಲ್ಲಿ ಶರಣಾಗುವುದನ್ನು ಕಂಡರು. ಈ ವಿಚಾರವಾಗಿ ಸಾರಾರಿಗೆ ಸ್ವಲ್ಪ ದ್ವಂದ್ವ ಉಂಟಾಗಿ ಅದನ್ನು ನಿವಾರಿಸಿಕೊಳ್ಳಲು ಶ್ರೀಮಾತೆಯವರನ್ನು ಅದರ ಕುರಿತಾಗಿ ಪ್ರಶ್ನೆಮಾಡಿದರು. ಆಗ ಶ್ರೀಮಾತೆಯವರು, "ನೋಡು, ಶ್ರೀಗುರುವಿನ ಆಧ್ಯಾತ್ಮಿಕ ನಿರ್ದೇಶನಗಳನ್ನು ಚಾಚೂ ತಪ್ಪದೇ ಅನುಸರಿಸಬೇಕು. ಆದರೆ ವ್ಯಾವಹಾರಿಕ ವಿಚಾರದಲ್ಲಿ ನಮ್ಮ ಸ್ವಂತ ಬುದ್ಧಿಯನ್ನು ಉಪಯೋಗಿಸಬಹುದು—ಒಂದು ವೇಳೆ ಇದು ಶ್ರೀಗುರುವಿಗೆ ವಿರುದ್ಧವಾದರೂ ಸರಿಯೇ!" ಈ ಮಾತಿನಿಂದ ಸಾರಾರಿಗೆ ತುಂಬ ಸಮಾಧಾನವಾಯಿತು.

೧೮೯೭ ಮಾರ್ಚ್ ತಿಂಗಳಲ್ಲಿ ಸ್ವಾಮಿ ವಿವೇಕಾನಂದರು ಸಾರಾ ಹಾಗೂ ಮಾರ್ಗರೆಟ್ ನೊಬೆಲ್‌ರಿಗೆ ಬೇಲೂರು ಮಠದಲ್ಲಿ ದೀಕ್ಷೆಯನ್ನು ನೀಡಿದರು. ಸಾರಾರಿಗೆ ಧೀರಮಾತಾ ಎಂದೂ, ಮಾರ್ಗರೆಟ್ ನೊಬೆಲ್‌ರಿಗೆ ನಿವೇದಿತಾ ಎಂದೂ ನಾಮಧೇಯ ಮಾಡಿದರು. ಇದೇ ಹೆಸರಿನಿಂದ ಮುಂದೆ ಸ್ವಾಮಿ ವಿವೇಕಾನಂದರು ಸಾರಾರಿಗೆ ಹಲವು ಪತ್ರಗಳನ್ನು ಬರೆದಿದ್ದಾರೆ. ಒಂದು ದಿನ ಬೇಲೂರು ಮಠದಲ್ಲಿ ಸ್ವಾಮಿ ಶಿವಾನಂದರಿಗೆ ಹಲವಾರು ಪ್ರಶ್ನೆಗಳನ್ನು ಭಕ್ತರು ಕೇಳಿದರು. ಸಾರಾರೂ ಸಹ, "ಸ್ತ್ರೀಯರು ಸಂನ್ಯಾಸ ತೆಗೆದುಕೊಳ್ಳಬಹುದೇ?" ಎಂದು ಪ್ರಶ್ನಿಸಿದರು. ಅದಕ್ಕೆ ಸ್ವಾಮಿ ಶಿವಾನಂದರು, "ಹೌದು, ಪ್ರತಿಯೊಬ್ಬರೂ ಸಂನ್ಯಾಸ ತೆಗೆದುಕೊಳ್ಳಬಹುದು, ಆತ್ಮನಿಗೆ ಲಿಂಗಭೇದವಿಲ್ಲ" ಎಂದರು. ಈ ಉತ್ತರದಿಂದ ಸಾರಾ ಅತ್ಯಂತ ಸಂತುಷ್ಟರಾದರು. ಮಠದ ಇತರ ಸಾಧುಗಳ ಸಹವಾಸದಿಂದ ಸಾರಾ ತಮಗೆ ಬೇಕಾದ ಆಧ್ಯಾತ್ಮಿಕ ಬೆಳಕನ್ನು ಪಡೆಯುತ್ತಿದ್ದರು.

(ಮುಂದುವರಿಯುತ್ತದೆ.)